ಮೈಸೂರಿನ ಕ್ಯಾತಮಾರನ ಹಳ್ಳಿಯಲ್ಲಿ ಸ್ಥಗಿತಗೊಂಡಿರುವ ಕೊಳವೆ ಬಾವಿಗಳ ಕಾಮಗಾರಿ

1104(1593)

ಶ್ರೀ.ಇ.ಮಾರುತಿರಾವ್ ಪವಾರ್ (ನರಸಿಂಹರಾಜ) ಮಾನ್ಯ ನಗರಾಭಿವದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಜರ್ಮನ್ ಪ್ರೆಸ್ ಜಲಸಂಗ್ರಹಾಗಾರಕ್ಕೆ 8ಎಂ.ಬಿ.ಡಿ. ಕುಡಿಯುವ ನೀರನ್ನು ತುಂಬುವುದರ ಮೂಲಕ ಸಿದ್ದಾರ್ಥ ಬಡಾವಣೆಗೆ ಎಂದಿನಂತೆ ಕಾವೇರಿ ನೀರು ಸರಬರಾಜು ಮಾಡಲಾಗುವುದು?

2 ಇದೇ ಜಲಸಂಗ್ರಹಾಗಾರದಿಂದ ಮತ್ತೊಂದು ಕೊಳವೆ ಅಳವಡಿಸಿ ಜ್ಯೋತಿನಗರ ಟ್ಯಾಂಕ್ ಮೂಲಕ ಗಾಯತ್ರಿಪುರಂ, ಕ್ಯಾತಮಾರನಹಳ್ಳಿ ಉದಯಗಿರಿ ಭಾಗಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

3. ಕ್ಯಾತ ಮಾರನಹಳ್ಳಿಯಲ್ಲಿ ಸ್ಥಗಿತಗೊಂಡಿರುವ ಕೊಳವೆ ಅಳವಡಿಸುವ ಕಾಮಗಾರಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಎಂ. ಎಸ್.ಪಾಟೀಲ್ (ನಗರಾಭಿವೃದ್ಧಿ ಸಚಿವರು.)

1. ಜುಲೈ 1999ರ ಮೊದಲನೇ ವಾರದಿಂದ ಸಿದ್ದಾರ್ಥ ಬಡಾವಣೆಗೆ ಜರ್ಮನ್ ಪ್ರೆಸ್ ಜಲ ಸಂಗ್ರಹಾಗಾರದಿಂದ ನೀರು ಸರಬರಾಜು ಮಾಡಲಾಗುವುದು.

2 ಈ ಜಲಸಂಗ್ರಹಾಗಾರದಿಂದ ಮಹದೇವಪುರ ರಸ್ತೆವರೆಗೆ ಕೊಳವೆ ಮಾರ್ಗದ ಕಾಮಗಾರಿ ಹಾಗೂ ಜ್ಯೋತಿನಗರದ ಮೇಲ್ಮಟ್ಟದ ಜಲಸಂಗ್ರಹಾಗಾರದ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು ಆಗಸ್ಟ್ 99ರಿಂದ ಈ ಬಡಾವಣೆಗಳಿಗೆ ನೀರು ಸರಬರಾಜು ಮಾಡಬಹುದಾಗಿದೆ.

3. ಕ್ಯಾತಮಾರನ ಹಳ್ಳಿಯಲ್ಲಿ ಸಾರ್ವಜನಿಕರಿಂದ ಕೊಳವೆ ಮಾರ್ಗ ಬದಲಾಯಿಸುವ ಒತ್ತಡ ಬಂದಿದ್ದರಿಂದ, ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ಈ ಕಾಮಗಾರಿಯನ್ನು ಆಗಸ್ಟ್ 99ರ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು.

ರೇಷ್ಮೆ ಬೆಳೆಗಾರರ ಸಮಸ್ಯೆಗಳು

1105(1632)

ಶ್ರೀ. ಎಸ್. ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡಂತ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿರುವ ರೇಷ್ಮೆ ಬೆಳೆಗಾರರ ಸಮಸ್ಯೆಗಳಾವುವು?
2. ಈ ಸಮಸ್ಯೆಗಳಿಂದ ಬೆಳೆಗಾರರ ಮೇಲೆ ಉಂಟಾಗಿರುವ ಪರಿಣಾಮಗಳೇನು ?
3. ಈ ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ಸರ್ಕಾರದವರು ಹಾಕಿಕೊಂಡಿರುವ ಯೋಜನೆಗಳೇನು ?

ಶ್ರೀ ಡಿ ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು):

1. ಸದ್ಯದಲ್ಲಿ ಪ್ರಮುಖವಾಗಿ ರೇಷ್ಮೆ ಗೂಡಿನ ಹಾಗೂ ಕಚ್ಚಾ ರೇಷ್ಮೆಯ ಬೆಳೆಯಲ್ಲಿ ಇಳಿಕೆ.
2. ಬೆಲೆ ಇಳಿಕೆಯಿಂದ ರೇಷ್ಮೆ ಕೃಷಿ ಲಾಭದಾಯಕವಾಗದೆ ಇರುವುದು.

3. ರೈತರ ಈ ಸಮಸ್ಯೆಯು ಸರ್ಕಾರದ ಮುಂದೆ ಬಂದಿದ್ದು, ಹೊಸದಾಗಿ ತಂದಿರುವ ಆಮದು ನೀತಿಯನ್ನು ಹಿಂತೆಗೆದುಕೊಳ್ಳುವಂತೆ ಕೇಂದ್ರಸರ್ಕಾರಕ್ಕೆ ಕೋರಲಾಗಿದೆ.

ರೇಷ್ಮೆ ಬೆಳೆಗಾರರ ಸಂಖ್ಯೆ ಇಳಿಮುಖವಾಗುತ್ತಿರುವದು.

1106(1633)

ಶ್ರೀ.ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ರೇಷ್ಮೆ ಬೆಳೆಗಾರರ ಸಂಖ್ಯೆ ಕಡಿಮೆಯಾಗುತ್ತಿರುವುದು ನಿಜವೇ. (ಕಳೆದ ಮೂರು ವರ್ಷಗಳ ಬೆಳೆಗಾರರ ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಸಮಸ್ಯೆಯ ಪರಿಹಾರಕ್ಕೆ ರಾಜ್ಯ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು):

ಅ) ಹೌದು.

ಕಳೆದ ಮೂರು ವರ್ಷಗಳಿಂದ ರೇಷ್ಮೆ ಬೆಳೆಗಾರರ ಸಂಖ್ಯೆ ಕೆಳಕಂಡಂತಿದೆ.

ವರ್ಷ	ರೇಷ್ಮೆ ಬೆಳೆಗಾರರ ಸಂಖ್ಯೆ			
	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಇತರೆ	ಒಟ್ಟು
1995 - 96	40,338	8484	2,84,518	3,33,340
1996 - 97	38,850	7940	2,65,502	3,12,292
1997- 98	35,467	9760	2,56,283	3,01,510

ಆ) 1) ಮಳೆ ಆಶ್ರಯದಲ್ಲಿದ್ದ ಹಿಪ್ಪುನೇರಳೆ ಪ್ರದೇಶ ಕಡಿಮೆ ಆಗಿರುವುದು.

2) ಇತರೆ ವಾಣಿಜ್ಯ ಬೆಳೆಗಳ ಪೈಪೋಟಿ.

3) ಗೂಡಿನ ಹಾಗೂ ರೇಷ್ಮೆಯ ಬೆಲೆ ಕುಂಠಿತಗೊಳ್ಳುತ್ತಿರುವುದು.

ಇ) 1) ಗೂಡಿನ ಹಾಗೂ ರೇಷ್ಮೆ ಬೆಲೆಯನ್ನು ಸ್ಥಿರೀಕರಣ ಗೊಳಿಸುವುದು.

2) ಹೊಸ ತಾಂತ್ರಿಕತೆಗಳನ್ನು ರೈತರಿಗೆ ಮನನ ಮಾಡಿ ಕೊಟ್ಟು ಗೂಡಿನ ಹಾಗೂ ರೇಷ್ಮೆಯ ಇಳುವರಿ ಮತ್ತು ಉತ್ಪಾದನೆ ಹೆಚ್ಚಿಸುವುದು.

3) ರೇಷ್ಮೆ ಬೆಳೆಗಾರರಿಗೆ ಪ್ರತ್ಯೇಕವಾದ ಹುಳು ಸಾಕಾಣಿಕೆ ಮನೆಗಳ ನಿರ್ಮಾಣಕ್ಕೆ ನಬಾರ್ಡ್ ಮುಖಾಂತರ ಸಾಲವನ್ನು ನೀಡುವುದು.

4) ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಕೆಟಾಲಿಟಿಕ್ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಹನಿ ನೀರಾವರಿ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವುದು.

Regarding Cocoon Markets in Mysore Seed Area.

1107 (1634)